ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಮಂಜೂರಾಗಿರುವ 20.00 ಎಕರೆ ಸರ್ಕಾರಿ ಜಮೀನಿನಲ್ಲಿ ಅನಧಿಕೃತ ಸಾಗುವಳಿ ನಡೆಯುತ್ತಿದ್ದು, ಕಂದಾಯ ಇಲಾಖೆ ಮತ್ತು ನಿಗಮದಿಂದ ಹಲವು ಬಾರಿ ಜಂಟಿ ಸರ್ವೆ ಕಾರ್ಯ ಕೈಗೊಂಡಾಗಲೆಲ್ಲಾ ರೈತರುಗಳು ಜಮೀನಿನ ಹಸ್ತಾಂತರಕ್ಕೆ ವಿರೋಧವನ್ನು ವ್ಯಕ್ತಪಡಿಸಿ, ಸರ್ವೆ ಕಾರ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕಂದಾಯ ಇಲಾಖೆಯವರು, ಜಮೀನನ್ನು ಭೌತಿಕವಾಗಿ ನಿಗಮಕ್ಕೆ ಹಸ್ತಾಂತರಿಸಲು ಸಾಧ್ಯವಾಗಿರುವುದಿಲ್ಲ.

ಅನಧಿಕೃತ ಸಾಗುವಳಿದಾರರನ್ನು ಆದಷ್ಟು ಬೇಗ ಜಮೀನಿನಿಂದ ತೆರವುಗೊಳಿಸಿ, ಗಡಿ ಗುರುತುವಿನೊಂದಿಗೆ ಹಸ್ತಾಂತರ ಮಾಡುವುದಾಗಿ ತಹಶೀಲ್ದಾರ್, ಸೊರಬ ರವರು ತಿಳಿಸಿರುತ್ತಾರೆ. ಅನಧಿಕೃತ ಸಾಗುವಳಿದಾರರನ್ನು ಮಂಜೂರಾದ ಜಮೀನಿನಿಂದ ತೆರವುಗೊಳಿಸಿ, ಗಡಿ ಗುರುತುವಿನೊಂದಿಗೆ ನಿಗಮಕ್ಕೆ ಭೌತಿಕವಾಗಿ ಹಸ್ತಾಂತರಿಸಿದ ನಂತರದಲ್ಲಿ ಕೆಎಸ್ಎಸ್ಐಡಿಸಿ ವತಿಯಿಂದ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಬೇಕಾಗಿರುತ್ತದೆ.

ಕಳ್ಳತನಗಳ ಪ್ರಕರಣ ತಡೆಗಟ್ಟುವುದು

77 (213); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ಸೊರಬ ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ಕಳ್ಳತನಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಎಷ್ಟು ಕಳ್ಳತನ ಪ್ರಕರಣಗಳು ದಾಖಲಾಗಿರುತ್ತವೆ, ಈ ಪೈಕಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

ಇ) ಕಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಯಾವುದಾದರೂ ವಿಶೇಷ ಯೋಜನೆ ರೂಪಿಸಲಾಗಿದೆಯೇ? (ವಿವರ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸೊರಬ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗಳಲ್ಲಿ ಕಳೆದ ವರ್ಷ ಅಂದರೆ, 2014 ನೇ ಸಾಲಿನಲ್ಲಿ ಒಟ್ಟು 37 ಕಳ್ಳತನ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 17 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಇ) **ಕಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.**

- ಪೊಲೀಸ್ ಠಾಣಾ ಸರಹದ್ದುಗಳಲ್ಲಿ ಕಳುವು ಪ್ರಕರಣಗಳನ್ನು ತಡೆಗಟ್ಟಲು ಹಗಲು ಮತ್ತು ರಾತ್ರಿ ಗಸ್ತನ್ನು ಬಿಗಿಗೊಳಿಸಲಾಗಿದೆ.
- ಚೀತಾ ಮಾದರಿಯ ಗಸ್ತು ವಾಹನಗಳನ್ನು ದಿನದ 24 ಗಂಟೆಗಳಲ್ಲಿಯೂ ಗಸ್ತು ತಿರುಗುವಂತೆ ವ್ಯವಸ್ಥೆ ಮಾಡಲಾಗಿದೆ.
- ಠಾಣಾ ಸರಹದ್ದುಗಳಲ್ಲಿರುವ ಪೂರ್ವಸಜಾ ಅಸಾಮಿಗಳು, ಎಂಓಬಿ ಆಸಾಮಿಗಳನ್ನು ಆಗಾಗ್ಗೆ ಚೆಕ್ ಮಾಡಿ ಅವರು ಅಪರಾಧಗಳಲ್ಲಿ ತೊಡಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಅನುಮಾನಸ್ಪದವಾದ ವ್ಯಕ್ತಿಗಳು ಕಂಡು ಬಂದಲ್ಲಿ ಅಂತಹವರ ಮೇಲೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಡಿಎಸ್‌ಪಿ ಶಿಕಾರಿಪುರ ಇವರ ಉಸ್ತುವಾರಿಯಲ್ಲಿ, ಸಿಪಿಐ ಮತ್ತು ಪಿಎಸ್‌ಐ ದರ್ಜೆಯ ಅಧಿಕಾರಿಗಳಿಂದ ಸತತವಾಗಿ ರಾತ್ರಿ ಗಸ್ತು ನಿರ್ವಹಿಸಿ, ಕಳುವು ಪ್ರಕರಣಗಳನ್ನು ತಡೆಗಟ್ಟಲು ಹೆಚ್ಚಿನ ಗಮನ ಹರಿಸಲಾಗುತ್ತಿದೆ.